# ಜ್ಞಾಪನ ಪತ್ರ

1) ಸಂಘದ ಹೆಸರು

2) ಕಾರ್ಯಾಲಯದ ವಿಳಾಸ : ಶ್ರೀಮತಿ ಸಿ.ಬಿ.ಪಾಟೀಲ ಪದವಿ ಕಾಲೇಜು ಹಳೆ ವಿದ್ಯಾರ್ಥಿಗಳ ಸಂಘ, ಚಿಂಚೋಳಿ, ತಾ: ಚಿಂಚೋಳಿ, ಜಿಲ್ಲಾ: ಕಲಬುರಗಿ

3) ಆಡಳಿತ ಮಂಡಳಿ : ಇತರರು

4) ಕಾರ್ಯವ್ಯಾಪ್ತಿ : ಕರ್ನಾಟಕ ರಾಜ್ಯವ್ಯಾಪ್ತಿ

## 1) ಸಂಘದ ಉದ್ದೇಶಗಳು :-

ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳ ಅಭಿವೃದ್ಧಿಗಾಗಿ ಶೈಕ್ಷಣಿಕ ಸಾಮಾಜಿಕ (ಬಾಲವಾಡಿ) ಪ್ರಾಥಮಿಕ ಶಾಲೆ, ಕಾಲೇಜು, ವಾಣಿಜ್ಯ ಶಿಕ್ಷಣ, ವೃತ್ತಿಪರ ಶಿಕ್ಷಣ, ತರಬೇತಿ ಕೇಂದ್ರ, ನರ್ಸಿಂಗಶಾಲೆ, ವೈದ್ಯಕೀಯ, ತಾಂತ್ರಿಕ ಶಿಕ್ಷಣ ಶಾಲೆ, ಕಾಲೇಜು ವಸತಿ ನಿಲಯ ಪ್ರಾರಂಭಿಸಲು ಪ್ರಯತ್ನಿಸುವದು ಮತ್ತು ಮುಂತಾದ ಜನಹಿತ ಕಾರ್ಯಕ್ರಮ ಮಾಡುವದು.

1) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳ ಬಡ ಮತ್ತು ಅರ್ಹ ವಿದ್ಯಾರ್ಥಿಗಳಿಗೆ ಶಿಕ್ಷಣ ವೇತನ, ಸಾಲ, ವಸತಿ, ಬಹುಮಾನ ಮುಂತಾದ ಸೌಲಭ್ಯಗಳನ್ನು ಒದಗಿಸುವದು.
2) ನಾಗರಿಕ ಆರೋಗ್ಯ ಹಾಗೂ ಕೌಟುಂಬಿಕ ಕಲ್ಯಾಣದಂತಹ ರಾಷ್ಟ್ರೀಯ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು.
3) ಸಂಘವು ರಾಷ್ಟ್ರೀಯ ಭಾವೈಕ್ಯತೆಯನ್ನು ಉಳಿಸುವಲ್ಲಿ ಮತ್ತು ಬೆಳೆಸುವಲ್ಲಿ ಪಾತ್ರ ವಹಿಸುತ್ತದೆ.
4) ಸಂಘವು ರಾಷ್ಟ್ರೀಯ ನಿರ್ಮಾಣ ಕಾರ್ಯದಲ್ಲಿ ಜನಜಾಗೃತಿಗಾಗಿ ಶ್ರಮಿಸುವದು.
5) ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮದಲ್ಲಿ ಜನಜಾಗೃತಿಗಾಗಿ ಶ್ರಮಿಸುವದು. ತೋಟಗಾರಿಕೆ.
6) ಸಮಾಜ ಶ್ರೇಯೋಭಿವೃದ್ಧಿಗಾಗಿ ಶ್ರಮಿಸುತ್ತಾ, ಶಾಲಾ ಕಾಲೇಜುಗಳನ್ನು ಸ್ಥಾಪಿಸುವುದು.
7) ಮಾನವ ಕುಲದಲ್ಲಿ ಐಕ್ಯಮತ ಸ್ವಾವಲಂಬನೆ ಹಾಗೂ ಸಹಕಾರಕ್ಕಾಗಿ ಶ್ರಮಿಸುವದು.
8) ರಾಜ್ಯ ಸರಕಾರ ಹಾಗೂ ಕೇಂದ್ರ ಸರಕಾರದಿಂದ ಜಾರಿಗೊಳಿಸಲಾದ ಮಹಿಳಾ ಮತ್ತು ಮಕ್ಕಳ ಕಲ್ಯಾಣ. ಹಾಗೂ ವಿಕಲಾಂಗ ಮತ್ತು ದಾರಿ ತಪ್ಪಿದ ಹೆಣ್ಣುಗಳ ಕಲ್ಯಾಣಕ್ಕಾಗಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವದು.
9) ಸಂಘದ ಆಸ್ತಿ ಹಾಗೂ ನಿವ್ವಳ ಲಾಭದ ಹಣವನ್ನು ಸಂಘದ ಉದ್ದೇಶಗಳಿಗಾಗಿ ಮಾತ್ರ ವಿನಿಯೋಜಿಸುವುದಲ್ಲದೆ ಸಂಘದ ಸದಸ್ಯರಿಗೆ ಡಿವಿಡೆಂಟ್ ಅಥವಾ ಬೋನಸ ರೂಪದಲ್ಲಿ ಕೊಡ ಕೂಡದು. ಆದರೆ ಸಂಘದ ಉದ್ದೇಶಗಳನ್ನು ಕಾರ್ಯರೂಪದಲ್ಲಿ ತರುವಲ್ಲಿ ನೇಮಿಸಬಹುದಾದ ಸಿಬ್ಬಂದಿ ಇಲ್ಲವೆ ಯಾವುದೇ ಸದಸ್ಯರಿಗೆ ಗೌರವಧನ ಪ್ರಯಾಣ ಭತ್ಯೆಯಂತಹ ಸಂಭಾವನೆಯನ್ನು ಕೊಡಬಹುದು.
10) ಶಿಕ್ಷಣ ಮತ್ತು ಸಂಸ್ಕೃತಿಯ ಪ್ರಗತಿ ಸಾಧಿಸುವದು.
11) ಒಟ್ಟಾರೆ ಶೈಕ್ಷಣಿಕ ಪ್ರಗತಿ ಹಾಗೂ ಇನ್ನಿತರ ವಿವಿಧೋದ್ದೇಶಗಳ ಅಭಿವೃದ್ಧಿಯ ಬೆಳವಣಿಗೆ ಹಾಗೂ ಪ್ರಗತಿಗಾಗಿ ದುಡಿಯುವದೇ ಈ ಸಂಘದ ಪರಮೋದ್ದೇಶವಾಗಿದೆ.
12) ಈ ಸಂಘವು ಮೇಲಿನ ಎಲ್ಲಾ ಉದ್ದೇಶಗಳೊಂದಿಗೆ, ಮಹಿಳೆಯರಿಗಾಗಿ ವಿವಿಧ ತರಹದ ಉದ್ಯೋಗಗಳನ್ನು ಪ್ರಾರಂಭಿಸಲು ರಾಜ್ಯ ಸರ್ಕಾರದಿಂದ ಹಾಗೂ ಕೇಂದ್ರ ಸರ್ಕಾರದಿಂದ ಸಿಗುವ ವಿವಿಧ ಯೋಜನೆಗಳಡಿಯಲ್ಲಿ, ಧನ ಸಹಾಯ ಸಾಲ ಸೌಲಭ್ಯ ಇತ್ಯಾದಿಗಳನ್ನು ಪಡೆದುಕೊಂಡು ಅಭಿವೃದ್ಧಿಪಡಿಸಿಕೊಳ್ಳಲಾಗುವದು. ಇವೇ ಮೊದಲಾದವುಗಳು ಈ ಸಂಘದ ಮುಖ್ಯ ಉದ್ದೇಶಗಳಾಗಿವೆ.
13) ಸಮಾಜದಲ್ಲಿ ಸಾಂಕ್ರಾಮಿಕ ರೋಗಗಳು ಏಡ್ಸ್ ಹಲವಾರು ಯೋಜನೆ ಅಡಿಯಲ್ಲಿ ಸಂಘ ಕಲಾತಂಡದೊಂದಿಗೆ ಪ್ರಚಾರ ಮಾಡಿ ಸಮಾಜಕ್ಕೆ ಎಚ್ಚರಗೊಳಿಸಲು ಪ್ರಯತ್ನಿಸುತ್ತದೆ.
14) ಈ ಸಂಘದ ವತಿಯಿಂದ ಸರ್ವಧರ್ಮದವರು ತಮ್ಮ ತಮ್ಮ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು.
15) ಕಾಲೇಜು ಮತ್ತು ಸಮಾಜದ ಸಂಪರ್ಕ ಕಲ್ಪಿಸುವುದು.
16) ಕಲಿತು ಹೋದ ಹಳೆ ವಿದ್ಯಾರ್ಥಿಗಳಲ್ಲಿ ಕಾಲೇಜಿನ ಬಗ್ಗೆ ಅಭಿಮಾನ ಮೂಡಿಸುವುದು.
17) ಕಾಲೇಜಿನ ಅಭಿವೃದ್ಧಿಯಲ್ಲಿ ಹಳೆ ವಿದ್ಯಾರ್ಥಿಗಳನ್ನು ತೊಡಗಿಸಿಕೊಳ್ಳುವದು.
18) ಹಳೆ ವಿದ್ಯಾರ್ಥಿಗಳು ಸ್ವಯಂ ಪ್ರೇರಿತವಾಗಿ ಕಾಲೇಜಿಗೆ ಸಹಾಯ ಮಾಡುವುದು.
19) ಪ್ರಸ್ತುತ ವಿದ್ಯಾರ್ಥಿಗಳಿಗೆ ಮಾದರಿಯಾಗುವ ರೀತಿಯಲ್ಲಿ ಕೆಲವು ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು.
20) ಸಂಘ ಕಾಲೇಜಿನ ಸಂಯುಕ್ತಾಶ್ರಯದಲ್ಲಿ ಮತ್ತು ಸಮ್ಮೇಳನಗಳನ್ನು ಹಮ್ಮಿಕೊಳ್ಳುವದು.
21) ಕಡು ಬಡವ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಉನ್ನತ ವ್ಯಾಸಂಗಕ್ಕಾಗಿ ಪ್ರೋತ್ಸಾಹಧನ ನೀಡುವುದು.

ಪುಟ – 2ಕ್ಕೆ

22) ಶೈಕ್ಷಣಿಕ ಅಭಿವೃದ್ಧಿಯಲ್ಲಿ ಪಾಲುಗಾರಿಕೆಯನ್ನಾಗಿ ಮಾಡುವುದು.
23) ಸಾಮಾಜ ಸುಧಾರಕರ ಜೀವನ ಚರಿತ್ರೆಗಳನ್ನು ಪರಿಚಯಿಸುವುದು.
24) ಮೌಲ್ಯ ಮತ್ತು ಕೌಶಲ್ಯ ಆಧಾರಿತ ಶಿಕ್ಷಣ ನೀಡುವಲ್ಲಿ ಪ್ರಯತ್ನಿಸುವುದು.
25) ಮಹಾವಿದ್ಯಾಲಯದಲ್ಲಿ ಮೂಲಭೂತ ಸೌಕರ್ಯಗಳು ಒದಗಿಸಲು ದುಡಿಯುವುದು,
26) ಸ್ಥಳೀಯ ಕಲೆ ಸಂಸ್ಕೃತಿ ಕಲಾವಿದರನ್ನು ಗುರುತಿಸಲು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.
27) ಯುವ ಸಬಲೀಕರಣಕ್ಕಾಗಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದು.
28) ಸಮಾಜಿಕ ಕಳಕಳಿಯನ್ನ ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು (ಸೇವಾ ಭಾವನೆ)

ಅಧ್ಯಕ್ಷರು, ಕಾರ್ಯದರ್ಶಿ